

ಜೀವನದ ಮೇಲೆ ಪರಿಣಾಮ ಬೀರುವುದು ಮಾತ್ರವಲ್ಲ, ಕೀಳರಿಮೆ, ಖಿನ್ನತೆಯಂತಹ ಮಾನಸಿಕ ಸಮಸ್ಯೆಗಳಿಗೂ ಕಾರಣವಾಗುತ್ತದೆ' ಎಂದು ಹೇಳುತ್ತಾರೆ ಈ ವೈದ್ಯರು.

## ಏನಿದು ಎಂಡೊಮೆಟ್ರಿಯೋಸಿಸ್?

ಎಂಡೊಮೆಟ್ರಿಯೋಸಿಸ್ ಎಂದರೆ ಎಂಡೊಮೆಟ್ರಿಯಮ್ ಎಂಬ ಗರ್ಭಾಶಯದ ಒಳಗಿರುವ ಒಂದು ಅಂಗಾಂಶವು ಗರ್ಭಕೋಶದ ಹೊರಗಡೆ ಬೆಳೆಯುವುದಕ್ಕೆ ಪ್ರಾರಂಭವಾಗುವ ಒಂದು ಪ್ರಕ್ರಿಯೆ. ಇದು ಈಸ್ಟ್ರೋಜನ್ ಅವಲಂಬಿತ ಅಸ್ವಸ್ಥತೆ ಮತ್ತು ಋತುಚಕ್ರದಂತೆಯೇ ಇದ್ದು, ಪ್ರತಿ ತಿಂಗಳೂ ಬೆಳೆಯುವ ಅಂಗಾಂಶವು ರಕ್ತಸ್ರಾವದ ರೂಪದಲ್ಲಿ ನಷ್ಟವಾಗುತ್ತದೆ. ಇದು ಹೊರ ಹೋಗುವುದಕ್ಕೆ ಯಾವುದೇ ಮಾರ್ಗವಿಲ್ಲದಿರುವ ಕಾರಣದಿಂದ, ಇದು ಗರ್ಭಕೋಶದ ಹೊರಗಿನ ಕೆಲವು ಭಾಗಗಳನ್ನು ತಡೆ (ಬ್ಲಾಕ್) ಮಾಡುವ ಮೂಲಕ ಅಲ್ಲಿ ಗಡ್ಡೆ ಅಥವಾ ಸಿಸ್ಟ್‌ಗಳನ್ನು ನಿರ್ಮಿಸುತ್ತದೆ. ಹೀಗಾಗಿ ಋತುಸ್ರಾವದ ಸಂದರ್ಭದಲ್ಲಿ ಬಹಳ ಒತ್ತಡ ಉಂಟಾಗಿ ವಿಪರೀತ ನೋವು ಕಾಣಿಸಿಕೊಳ್ಳುತ್ತದೆ. ಜತೆಗೆ ಸಹಿಸಲಾಗದಷ್ಟು ರಕ್ತಸ್ರಾವವೂ ಉಂಟಾಗುತ್ತದೆ.

'ಇದು ಸಾಮಾನ್ಯವಾಗಿ ಅಂಡಾಶಯಗಳು, ಬೊವೆಲ್ (ಗರ್ಭಭಾಗ) ಅಥವಾ ಪೆಲ್ವಿಸ್ ಮೇಲಿನ ಅಂಗಾಂಶಗಳನ್ನು ಒಳಗೊಳ್ಳುತ್ತದೆ. ಸಾಕಷ್ಟು ಮುಂದುವರೆದ ಸ್ಥಿತಿಯಲ್ಲಿರುವ ಎಂಡೊಮೆಟ್ರಿಯೋಸಿಸ್ ಸಮಸ್ಯೆ ಮಹಿಳೆಗೆ ಮಕ್ಕಳಾಗುವ ಸಾಮರ್ಥ್ಯವನ್ನು ಕುಗ್ಗಿಸುತ್ತದೆ' ಎಂದು ಹೇಳುತ್ತಾರೆ ಸ್ತ್ರೀರೋಗ ತಜ್ಞೆ ಡಾ. ಅನು ಶ್ರೀಧರ್.

ಭಾರತದ ಎಂಡೊಮೆಟ್ರಿಯೋಸಿಸ್ ಸೊಸೈಟಿಯ ಪ್ರಕಾರ, ದೇಶದಲ್ಲಿ ಅಂದಾಜು 25 ಲಕ್ಷ ಮಹಿಳೆಯರು ಈ ಅಸ್ವಸ್ಥತೆಯಿಂದ ಬಳಲುತ್ತಿದ್ದಾರೆ. ಅಸ್ವಸ್ಥತೆಯ ಬಗೆಗಿನ ಅರಿವಿನ ಕೊರತೆಯ ಕಾರಣದಿಂದಾಗಿ ಈ ರೋಗಕ್ಕೆ ತುತ್ತಾಗುವವರ ಸಂಖ್ಯೆಯು ವರ್ಷದಿಂದ ವರ್ಷಕ್ಕೆ ಏರಿಕೆಯನ್ನೇ ಕಾಣುತ್ತಿದೆ. ವೈದ್ಯರ ಸಲಹೆ ಸೂಚನೆಗಳನ್ನು ತಪ್ಪದೆ ಪಾಲಿಸಿದರೆ ಈ ಸಂಕಟಕ್ಕೆ ಪರಿಹಾರ ಕಂಡುಕೊಳ್ಳಬಹುದು.

## ಎಂಡೊಮೆಟ್ರಿಯೋಸಿಸ್‌ಗೆ ಕಾರಣಗಳು

ಋತುಸ್ರಾವದ ಸಂದರ್ಭದಲ್ಲಿ ವಿಪರೀತ ರಕ್ತಸ್ರಾವ. ಇದರ ಜತೆಗೆ ಎಂಡೊಮೆಟ್ರಿಯಲ್ ಕಣಗಳು ಕೂಡ ರಕ್ತದೊಂದಿಗೆ ಪ್ರವಹಿಸುವುದು. ಎಂಡೊಮೆಟ್ರಿಯಲ್ ಅಂಗಾಂಶಗಳು ಗರ್ಭಕೋಶದ ಸುತ್ತ ಮತ್ತು ಫೆಲೋಪಿಯನ್ ಟ್ಯೂಬ್‌ಗಳಲ್ಲೂ ಬೆಳೆದು ಮಹಿಳೆಗೆ ವಿಪರೀತ ರಕ್ತಸ್ರಾವ ಉಂಟಾಗುವಂತೆ ಮಾಡುತ್ತದೆ. ಪ್ರತಿ ತಿಂಗಳೂ ಋತುಸ್ರಾವದ ಸಮಯದಲ್ಲಿ ಹೆಚ್ಚಿನ ರಕ್ತಸ್ರಾವ, ಹೊಟ್ಟೆನೋವು ಉಂಟಾಗಿ ಹೆಣ್ಣು ದೈಹಿಕ, ಮಾನಸಿಕ ಯಾತನೆ ಪಡುವಂತಾಗುತ್ತದೆ.

ಗರ್ಭಕೋಶದ ಹೊರಗೆ ಅಂಗಾಂಶಗಳು ಬೆಳೆಯುವ ಕಾರಣ ಎಂಡೊಮೆಟ್ರಿಯೋಸಿಸ್ ತೊಂದರೆ ಇರುವ ಮಹಿಳೆ ಬಂಜೆತನಕ್ಕೆ ಒಳಗಾಗುವ ಸಾಧ್ಯತೆಯೂ ಇದೆ. ಗರ್ಭಕೋಶದ ಹೊರಗೆ ಅನಗತ್ಯ ಎಂಡೊಮೆಟ್ರಿಯಲ್ ಕಣಗಳು ಬೆಳೆಯುವುದರಿಂದ ಅಂಡಾಣುಗಳಿಗೆ ಗರ್ಭಕೋಶದೊಳಗೆ ಜಾಗವೂ ಕಡಿಮೆಯಾಗಿ ಫಲವತ್ತತೆ ಸಮಸ್ಯೆ ಉಂಟಾಗುವ ಸಾಧ್ಯತೆ ಇರುವುದರಿಂದ ಮಹಿಳೆಯರು ನಿರ್ಲಕ್ಷ್ಯ ವಹಿಸಲೇಬಾರದು.

## ಆನುವಂಶೀಯ ತೊಂದರೆ

ಕೆಲವು ಮಹಿಳೆಯರಿಗೆ ಎಂಡೊಮೆಟ್ರಿಯೋಸಿಸ್ ಆನುವಂಶೀಯ ವಾಗಿಯೂ ಬರುವ ಸಾಧ್ಯತೆಯೂ ಇದೆ. ತಾಯಿ ಅಥವಾ ಸ್ವಂತ ಅಕ್ಕ ಈ ಸಮಸ್ಯೆಯಿಂದ ಬಳಲುತ್ತಿದ್ದರೆ ಹೆಣ್ಣು ಮಗುವಿಗೆ ಸಮಸ್ಯೆ ಬರಲೂಬಹುದು. ಹಿಸರೆಕ್ಟಮಿ, ಸಿಸೇರಿಯನ್ ಶಸ್ತ್ರಚಿಕಿತ್ಸೆ ಆದ ನಂತರ ಅಂಗಾಂಶಗಳಿಗೆ ಹಾನಿಯಾಗುತ್ತದೆ. ಹೀಗಾಗಿ ಇಂಥ ಮಹಿಳೆಯರಲ್ಲೂ ಎಂಡೋಮೆಟ್ರಿಯಾಸಿಸ್ ಬರುವ ಸಾಧ್ಯತೆ ಇದೆ. ಭ್ರೂಣದ ಬೆಳವಣಿಗೆ ಸಮಯದಲ್ಲಿ ಹೊಟ್ಟೆ ಮತ್ತು ಪೆಲ್ವಿಕ್ ಮಧ್ಯೆ ಎಂಡೊಮೆಟ್ರಿಯಲ್ ಕಣಗಳು ಬೆಳೆದರೂ ಸಮಸ್ಯೆ ತೀವ್ರವಾಗಬಹುದು.

## ಲಕ್ಷಣಗಳು

- ಹೊಟ್ಟೆಯಲ್ಲಿ ನೋವು
- ಋತುಸ್ರಾವದ ಸಮಯದಲ್ಲಿ ತೀವ್ರವಾದ ನೋವು
- ಫಲವತ್ತತೆ ಕೊರತೆ
- ಮಿಲನದ ಸಮಯದಲ್ಲಿ ವಿಪರೀತ ನೋವು
- ಋತುಸ್ರಾವದ ಸಮಯದಲ್ಲಿ ಹೆಚ್ಚಾದ ರಕ್ತಸ್ರಾವ

## ಯಾವ ವಯಸ್ಸಿನಲ್ಲಿ ಕಾಣಿಸಿಕೊಳ್ಳುತ್ತದೆ?

ಸಾಮಾನ್ಯವಾಗಿ ಹುಡುಗಿ 20 ವರ್ಷ ತಲುಪಿದಾಗ (ಕೆಲವೊಮ್ಮೆ ಋತುಸ್ರಾವದ ಮೊದಲ ಹಂತದ ಹದಿಹರೆಯದ ಬಾಲಕಿಯರಲ್ಲೂ) ಎಂಡೊಮೆಟ್ರಿಯೋಸಿಸ್ ಸಮಸ್ಯೆ ಕಾಣಿಸಿಕೊಳ್ಳಬಹುದು. ಇದು ನಡುವಯಸ್ಸು ದಾಟಿ ಋತುಬಂಧದವರೆಗೂ ಮುಂದುವರಿಯಬಹುದು.

ಹೊಟ್ಟೆ, ಗರ್ಭಕೋಶದ ಯಾವುದೇ ಸಮಸ್ಯೆ ಕಂಡುಬಂದರೂ ಮೊದಲು ನುರಿತ ಸ್ತ್ರೀರೋಗ ತಜ್ಞರನ್ನು ಭೇಟಿಯಾಗಿ ಚಿಕಿತ್ಸೆ ಪಡೆಯಬೇಕು. ಆರಂಭದ ಹಂತದಲ್ಲಿ ಸಮಸ್ಯೆಗೆ ಬೇಗ ಪರಿಹಾರ ಸಿಗುತ್ತದೆ.

## ಚಿಕಿತ್ಸೆ ಏನು?

ಎಂಡೊಮೆಟ್ರಿಯಾಸಿಸ್‌ಗೆ ಶಾಶ್ವತ ಪರಿಹಾರ ಸಿಗುವುದು ಕಷ್ಟ. ಆದರೆ ರೋಗದ ಪತ್ತೆ ಆರಂಭದ ಹಂತದಲ್ಲೇ ಗೊತ್ತಾದರೆ ವಿವಿಧ ರೀತಿಯ ಚಿಕಿತ್ಸೆ ನೀಡಬಹುದು. ಇದನ್ನು ನೋವು ನಿವಾರಕ ಮಾತ್ರೆ, ಹಾರ್ಮೋನ್ ಥೆರಪಿ ಹಾಗೂ ಸರ್ಜರಿ ಮೂಲಕ ನಿವಾರಿಸಿಕೊಳ್ಳಬಹುದು.

ಋತುಸ್ರಾವದ ಸಮಯದಲ್ಲಿ ಬರುವ ವಿಪರೀತ ನೋವಿಗೆ ಗುಳಿಗೆ, ಹಾರ್ಮೋನ್ ಥೆರಪಿಯಲ್ಲಿ ವಿವಿಧ ರೀತಿಯ ಮಾತ್ರೆಗಳು ಸಹಾಯಕ್ಕೆ ಬರಬಹುದು. ಲ್ಯಾಪ್ರೊಸ್ಕೋಪಿಕ್ ಸರ್ಜರಿ, ಮಿನಿಮಾಲ್ ಇನ್‌ವೇಸಿವ್ ಸರ್ಜರಿ ಕೂಡ ಸಮಸ್ಯೆಗೆ ಸೂಕ್ತ ಪರಿಹಾರ ನೀಡುತ್ತದೆ.

ಎಂಡೊಮೆಟ್ರಿಯಾಸಿಸ್ ಹಳ್ಳಿಯ ಮಹಿಳೆಯಲ್ಲಿ ಹೆಚ್ಚು. ಏಕೆಂದರೆ ಇಲ್ಲಿ ಅರಿವಿನ ಕೊರತೆ ಇರುತ್ತದೆ. ಸೂಕ್ತವಾದ ಚಿಕಿತ್ಸೆ ಪಡೆಯದೇ ಇರುವುದು ಕೂಡ ಕಾರಣವಾಗಬಹುದು. ■